ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರ: 1628/2018

ಚಾಸಾ: 9 ಪ್ರಾಸಾ:7

ದಿನಾಂಕ: 12.08.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಲೋಕೇಶ್ |
| ತಂದೆಯ ಹೆಸರು | : | ಶಿವಣ್ಣ ಎಂ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ಕಾರ್ಕಳ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 2013 ರಿಂದ 2019ರವರೆಗೆ ಕುಂದಾಪುರದ ಪೊಲೀಸ್ ಠಾಣೆಯಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸಿದ್ದು ವಾಹನ ಸಂಖ್ಯೆ ಕೆಎ-20-ಜಿ-153 ಆಗಿರುತ್ತದೆ.

ದಿ: 26-10-2017 ರಂದು ಚಾಸಾ1ರವರೊಂದಿಗೆ ಸಿಬ್ಬಂದಿಯಾದ ಚಾಸಾ-8ರವರೊಂದಿಗೆ ನಾನು ಇಲಾಖಾ ಜೀಪಿನ ಚಾಲಕನಾಗಿ ವಿಶೇಷ ರಾತ್ರಿ ರೌಂಡ್ಸ್ ಕರ್ತವ್ಯದಲ್ಲಿ ಇದ್ದಾಗ ದಿ: 27-10-2017ರ ಮುಂಜಾನೆ 4-30 ಗಂಟೆಗೆ ಬಾತ್ಮಿದಾರರು ಕರೆ ಮಾಡಿ ಆನಗಳ್ಳಿ ವಾರಾಹಿ ನದಿಯಿಂದ ಅಕ್ರಮವಾಗಿ ಮರಳು ಸಾಗಾಟ ಮಾಡಿಕೊಂಡು ಮಾರ್ಕೋಡು ಕಡೆಗೆ ಬರುತ್ತಿದ್ದಾರೆ ಎಂದು ತಿಳಿಸಿದ ಮೇರೆಗೆ ಚಾಸಾ-1ರವರು ಕೂಡಲೇ ಅಲ್ಲಿಗೆ ತೆರಳಿ ಕಳಂಜೆ ಗ್ರಾಮದ ಅಂಗನವಾಡಿ ಬಳಿ ಇಲಾಖಾ ಜೀಪನ್ನು ನಿಲ್ಲಿಸಿ ಅಲ್ಲಿ ಮರೆಯಲ್ಲಿ ನಿಂತು ನೋಡುತ್ತಿದ್ದಾಗ ಮುಂಜಾನೆ ಸಮಯ 4-50ರ ಸುಮಾರಿಗೆ ಕೆದೂರಿನಿಂದ ಒಂದು ವಾಹನ ಬರುತ್ತಿದ್ದು ಅದನ್ನು ನಿಲ್ಲಿಸುವಂತೆ ನಾವು ಅಲ್ಲಿಂದಲೇ ಟಾರ್ಚ್ ಲೈಟ್ ಬಿಟ್ಟು ಸೂಚನೆ ನೀಡಿದಾಗ ವಾಹನವನ್ನು ನಿಲ್ಲಿಸಿದ್ದು, ಚಾಲಕರು ಓಡಿ ಹೋಗಿರುತ್ತಾರೆ. ನಂತರ ಚಾಸಾ-1 ಮತ್ತು ಸಿಬ್ಬಂದಿಯವರಾದ ಚಾಸಾ-8ರವರು ಮುಂದಕ್ಕೆ ನಡೆದುಕೊಂಡು ಹೋದಾಗ ಆತ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು

ನೋಡಿ ಅಲ್ಲಿ ಪಕ್ಕದ ಹಾಡಿಗೆ ಓಡಿ ಹೋಗಿರುತ್ತಾನೆ. ಆತ ಹರೀಶ್ ಆನಗಳ್ಳಿ ಎಂದು ಚಾಸಾ-1ರವರು ತಿಳಿಸಿರುತ್ತಾರೆ.

ನಂತರ ವಾಹನ ನೋಡಲಾಗಿ ಕೆಎ-20-ಸಿ-3817 ಗೂಡ್ಸ್ 407 ವಾಹನವಾಗಿದ್ದು, ಅದನ್ನು ಪರಿಶೀಲಿಸಲಾಗಿ ವಾಹನದಲ್ಲಿ ಮರಳು ತುಂಬಿರುವುದು ಕಂಡು ಬಂದಿರುತ್ತದೆ. ನಂತರ ಚಾಸಾ-8ರವರಿಗೆ ಇಬ್ಬರು ಸ್ಥಳೀಯರನ್ನು ಪಂಚರನ್ನಾಗಿ ಕರೆ ತರುವಂತೆ ಸೂಚಿಸಿದ್ದು, ಅದರಂತೆ ಚಾಸಾ-3 ಮತ್ತು 4ರವರು ಕೂಡಲೇ ಸ್ಥಳಕ್ಕೆ ಬಂದಿದ್ದು ಅವರ ಸಮಕ್ಷಮ ಮರಳು ತುಂಬಿದ ವಾಹನವನ್ನು ಬೆಳಿಗ್ಗೆ 5 ರಿಂದ 6 ಗಂಟೆಯ ಸಮಯದಲ್ಲಿ ಮಹಜರು ಮುಖೇನ ಸ್ವಾಧೀನಪಡಿಸಿಕೊಂಡು ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಯವರಿಗೆ ನನ್ನ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ನಿಪಿ-1ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-11ರಲ್ಲಿ ಕಂಡು ಬರುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಎಂ ಎಸ್ ರವರಿಂದಃ**

ನಮ್ಮ ಠಾಣೆಯಿಂದ ತಕ್ಷೀರು ಸ್ಥಳ 2 ಕಿ.ಮೀ ದೂರದಲ್ಲಿ ಇದೆ. 3 ಜನ ಸಿಬ್ಬಂದಿಯವರು ಹೋಗಿರುತ್ತೇವೆ. ಚಾಸಾ-1, 8 ಮತ್ತು ನಾನು ಇದ್ದೇವು. ಸ್ಥಳಕ್ಕೆ ಹೋಗುವ ಮೊದಲು ಯಾವುದೇ ಖಾಸಗಿ ವ್ಯಕ್ತಿಗಳನ್ನು ಕರೆದುಕೊಂಡು ಹೋಗಿಲ್ಲ. ಸ್ಥಳದಲ್ಲಿ ಸುಮಾರು 1 ಕಾಲು ಗಂಟೆ ಇದ್ದೇವು. ಸ್ಥಳಕ್ಕೆ ಇಲಾಖಾ ವಾಹನದಲ್ಲಿ ಹೋಗಿರುತ್ತೇವೆ. ಮರಳು ತೆಗೆಯುತ್ತಿರುವುದಾಗಿ ಚಾಸಾ-1 ರವರಿಗೆ ಬಾತ್ಮಿದಾರರಿಂದ ಮಾಹಿತಿ ಬಂದಿರುತ್ತದೆ. ಯಾರು ಮಾಹಿತಿ ನೀಡಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಮರಳು ತೆಗೆಯುತ್ತಿರುವುದನ್ನು ನಾನು ನೋಡಿಲ್ಲ. ಸುಮಾರು 40 ಅಡಿ ದೂರದಿಂದ ಆರೋಪಿಯನ್ನು ನೋಡಿರುತ್ತೇನೆ.

ಆರೋಪಿ ನಮ್ಮನ್ನು ನೋಡಿ ವಾಹನ ನಿಲ್ಲಿಸಿ ಓಡಿ ಹೋಗಿರುತ್ತಾನೆ. ಆರೋಪಿ ಅಕ್ರಮವಾಗಿ ಮರಳು ತೆಗೆಯುತ್ತಿದ್ದನ್ನು ನಾನು ನೋಡಿಲ್ಲ. ಸ್ಥಳದಲ್ಲಿ ಆರೋಪಿ ವಾಹನವನ್ನು ಬಿಟ್ಟು ಹೋಗಿದ್ದ ಬಗ್ಗೆ ವೀಡಿಯೋ ಅಥವಾ ಪೋಟೋ ತೆಗೆದಿಲ್ಲ. ಪೋಟೋ ಅಥವಾ ವೀಡಿಯೋ ತೆಗೆಯಲು ಯಾವುದೇ ತೊಂದರೆ ಇರಲಿಲ್ಲ. ನಾವು ತಡೆದು ನಿಲ್ಲಿಸಿದ ಗಾಡಿಯಲ್ಲಿ ಮರಳು ಇತ್ತು. ಮರಳು ಇದ್ದ ವಾಹನದ ಪೋಟೋ ಅಥವಾ ವೀಡಿಯೋ ನಾನು ತೆಗೆದಿಲ್ಲ.

ಆರೋಪಿ ಅಕ್ರಮವಾಗಿ ಮರಳನ್ನು ತೆಗೆದಿರಲಿಲ್ಲ ಎಂದರೆ ಸರಿಯಲ್ಲ. ಆತ ಮರಳನ್ನು ಅಕ್ರಮವಾಗಿ ಸಾಗಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ವೀಡಿಯೋ ಅಥವಾ ಪೋಟೋ ತೆಗೆದಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1ರವರಿಗೆ ಮಾಹಿತಿ ಬಂದಾಗ ನಾವು ರಾತ್ರಿ ಗಸ್ತಿನಲ್ಲಿ ಇದ್ದೇವು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ಸ್ಥಳದಲ್ಲಿ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿದ್ದು ಎಂದರೆ ಸರಿಯಲ್ಲ. ಆರೋಪಿಯನ್ನು ಬೇರೆ ಕಡೆ ವಶಕ್ಕೆ ಪಡೆದು ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ಬಗ್ಗೆ ಚಾಸಾ-1 ರವರು ಹೇಳಿದ ಮೇರೆಗೆ ತಿಳಿದು ಬಂದಿರುತ್ತದೆ.

ಸದ್ರಿ ದಿನ ಓಡಿ ಹೋದ ವ್ಯಕ್ತಿ ಯಾರು ಎಂದು ನೋಡಿರುತ್ತೇನೆ. ಈ ಹಿಂದೆ ಸದ್ರಿ ವ್ಯಕ್ತಿಯನ್ನು ನಾನು ನೋಡಿಲ್ಲವೆಂದು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ತನ್ನ ಮನೆಯಲ್ಲಿ ನಿಲ್ಲಿಸಿದ ವಾಹನವನ್ನು ಈ ಪ್ರಕರಣದಲ್ಲಿ ಅಳವಡಿಸಿಕೊಂಡು ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಬೇರೆ ಪ್ರಕರಣದಲ್ಲಿ ವಶಕ್ಕೆ ಪಡೆದಿದ್ದ ಮರಳನ್ನು ಈ ಪ್ರಕರಣದಲ್ಲಿ ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ಅನವಶ್ಯಕವಾಗಿ ಆರೋಪಿಯ ವಿರುದ್ದ ಈ ಪ್ರಕರಣವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ

ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**